

# ವಿಜ್ಞಾನದ ಓದಿನಿಂದಲೇ ವೈಜ್ಞಾನಿಕ ಮನೋಧರ್ಮ ಬರುವಂತದ್ದಲ್ಲ...

**ವೈಜ್ಞಾನಿಕ ಮನೋಧರ್ಮದ ಅಗತ್ಯ ಜನಸಾಮಾನ್ಯರಿಗೆ, ಸಾಹಿತಿಗಳಿಗಷ್ಟೇ ಅಲ್ಲ, ವಿಜ್ಞಾನಿಗಳಿಗೂ ಅಗತ್ಯವಿದೆ. ಜಗತ್ತಿನ ಅರ್ಧ ಜನಸಂಖ್ಯೆಯನ್ನು ಕೀಳಾಗಿಸಿದ, ಶೋಷಿಸಿದ, ತುಳಿದ ಅಪರಾಧದಲ್ಲಿ ವಿಜ್ಞಾನಿಗಳ ಪಾಲೂ ಇದೆ.**

■ ನೇಮಿಚಂದ್ರ

ನಿರ್ಲಿಪ್ತ ಎನ್ನುವ ವಿಜ್ಞಾನ ಕೂಡ ಸಾಮಾಜಿಕ ಅಗತ್ಯಗಳ, ನಂಬಿಕೆಗಳ ದಿಕ್ಕಿನಲ್ಲಿ ಬೆಳೆಯುತ್ತದೆ. ಸಾಮಾಜಿಕ ಅಂಶಗಳು ವಿಜ್ಞಾನ – ತಂತ್ರಜ್ಞಾನದ ಹಾದಿಯನ್ನು ರೂಪಿಸುತ್ತವೆ. ಪಿತೃಪ್ರಧಾನ ಸಮಾಜದಲ್ಲಿ ವಿಜ್ಞಾನದ ಅಳವಡಿಕೆಗಳು ಮಹಿಳಾ ಶೋಷಣೆಯ ಅಸ್ತ್ರವಾಗಬಲ್ಲದ್ದನ್ನು ನಾವು ಕಂಡಿದ್ದೇವೆ. ವಿಜ್ಞಾನದ ಬಂಡವಾಳಶಾಹಿ ಗುಣವನ್ನು ನಿಯಂತ್ರಿಸುವ ಅಗತ್ಯವಿದೆ. ಅಮೆರಿಕೆಯ ರೋನಾಲ್ಡ್ ಎರಿಕ್ಸನ್ ಗರ್ಭಧಾರಣೆಗೆ ಮೊದಲೇ ಗಂಡು ಮಗುವನ್ನು ಆಯ್ದುಕೊಳ್ಳಬಹುದಾದಂಥ ವೈಜ್ಞಾನಿಕ ತಂತ್ರವನ್ನು ಕಂಡು ಹಿಡಿದು ಪೇಟೆಂಟ್ ಮಾಡಹೊರಟದ್ದಿದೆ. ಹುಟ್ಟುವ ಮೊದಲೇ ಹೆಣ್ಣು ಭ್ರೂಣದ ಸಾಧ್ಯತೆಯನ್ನು ತಡೆಯುವ ತಂತ್ರಜ್ಞಾನದ ಪರಿಣಾಮವನ್ನು ನಾವಾಗಲೇ ಅನುಭವಿಸುತ್ತಿದ್ದೇವೆ. ಭ್ರೂಣಾವಸ್ಥೆಯಲ್ಲಿ ವಂಶವಾಹಿಯಲ್ಲಿಯ ಕೊರತೆಗಳನ್ನು, ಆನುವಂಶಿಕ ರೋಗಗಳನ್ನು ಕಂಡು ಹಿಡಿಯುವ ಸದುದ್ದೇಶದಿಂದ ಬಂದ 'ಆಮ್ನಿಯಾಸಿಂಟೆಸಿಸ್' ಮತ್ತು ಇಂದು ಬಳಸುವ 'ಅಲ್ಟ್ರಾಸಾನಿಕ್ ಸ್ಕ್ಯಾನ್' ಭ್ರೂಣದ ಲಿಂಗಪತ್ತೆಗೆ ತದನಂತರ ಹೆಣ್ಣು ಭ್ರೂಣದ ಹತ್ಯೆಗೆ ಕಾರಣವಾಗಿರುವುದನ್ನು ನೋಡಿದ್ದೇವೆ. ಅಗತ್ಯದ ಕಾನೂನುಗಳು ಇದ್ದರೂ, ಸಾಮಾಜಿಕ ಬದಲಾವಣೆ ಇಲ್ಲದೆ ವಿಜ್ಞಾನದ ದುರುಪಯೋಗವನ್ನು ತಡೆಯುವುದು ಕಷ್ಟವಾಗಿದೆ.

ವಿಜ್ಞಾನ ಒಂದು ಸಲಕರಣೆ, ಮಾನವ ಸೇವೆಗೆ ಇಲ್ಲವೇ ಮಾನವ ನಾಶಕ್ಕೂ ಬಳಸಬಹುದಾದ ಸಾಧನ. ಆ ಬಳಕೆಯ ಪರಿಣಾಮಗಳನ್ನು ವಿವೇಚಿಸುವ ವಿವೇಕ ಮನುಷ್ಯನಿಗೆ ಬೇಕು. ವಿಜ್ಞಾನವಷ್ಟೇ ಅಲ್ಲ, ಸಾಹಿತಿಯ ಬರೆಯುವ ಸಾಮರ್ಥ್ಯವೂ ಆಯುಧವಾಗಬಲ್ಲದು. ಇಡೀ ಒಂದು ಲಿಂಗ, ವರ್ಗ, ಜಾತಿ, ಜನಾಂಗ, ಧರ್ಮವನ್ನು ಮತ್ತೊಂದರ ವಿರುದ್ಧ ಎತ್ತಿ ಕಟ್ಟಬಲ್ಲದು.

ಹಾಗೆಂದೇ ವೈಜ್ಞಾನಿಕ ಮನೋಧರ್ಮದ ಅಗತ್ಯ ಜನಸಾಮಾನ್ಯರಿಗೆ, ಸಾಹಿತಿಗಳಿಗಷ್ಟೇ ಅಲ್ಲ, ವಿಜ್ಞಾನಿಗಳಿಗೂ ಅಗತ್ಯವಿದೆ. ವಿಷಾದವೆಂದರೆ ವಿಜ್ಞಾನದ ಓದಿನಿಂದಲೇ ವೈಜ್ಞಾನಿಕ ಮನೋಧರ್ಮ ಬರುವಂತದ್ದಲ್ಲ. ಹಾಗೆ ನೋಡಿದರೆ ವಿಜ್ಞಾನಿಯ ಪೂರ್ವಗ್ರಹಗಳು ಓರ್ವ ಸಾಮಾನ್ಯನ ಪೂರ್ವಗ್ರಹಗಳಿಗಿಂತ ಹೆಚ್ಚು ಅಪಾಯಕಾರಿ. ತನ್ನ ಪೂರ್ವಗ್ರಹಗಳನ್ನು ಓರ್ವ ವಿಜ್ಞಾನಿ 'ವಿಜ್ಞಾನ'ದ ಬಣ್ಣ ಹಚ್ಚಿ, ಪ್ರಸಾರ ಮಾಡಬಲ್ಲ. ವಿಜ್ಞಾನ ಚರಿತ್ರೆಯಲ್ಲಿ ಇಂಥ ಹೇರಳ ಉದಾಹರಣೆಗಳಿವೆ. ಹೆಂಗಸು ಗಂಡಸಿಗಿಂತ ಜನ್ಮತಃ ಕೀಳು, ಅಸಮರ್ಥಳು ಎಂದು ನಂಬಿದ್ದ ವಿಜ್ಞಾನಿಗಳು 19ನೇ ಶತಮಾನದಲ್ಲಿ 'ವಿಕಾಸದ ಹಾದಿಯಲ್ಲಿ ಹೆಣ್ಣು ಗಂಡಿಗಿಂತ ಬಹಳ ಹಿಂದೆ ಉಳಿದಿದ್ದಾಳೆ' ಎಂದು ಸಮರ್ಥಿಸಲು ವಿಜ್ಞಾನವನ್ನು ಬಳಸಿದರು. ಜಗತ್ತಿನ ಅರ್ಧ ಜನಸಂಖ್ಯೆಯನ್ನು ಕೀಳಾಗಿಸಿದ, ಶೋಷಿಸಿದ, ತುಳಿದ ಅಪರಾಧದಲ್ಲಿ ವಿಜ್ಞಾನಿಗಳ ಪಾಲೂ ಇದೆ. ಇಂತಹುದೇ ವಾದಗಳನ್ನು ಒಂದು ಜಾತಿಯ, ಜನಾಂಗದ, ವರ್ಗದ ಶೋಷಣೆಗೆ ಸಾಧನವಾಗಿ ಬಳಸಿದ ಪ್ರಸಂಗಗಳಿವೆ. ಸಾಮಾಜಿಕಸಾಂಸ್ಕೃತಿಕ ಅಸಮಾನತೆಯಿಂದ ಹುಟ್ಟಿಕೊಂಡ ವ್ಯತ್ಯಾಸಗಳಿಗೆ ಜೀವಶಾಸ್ತ್ರೀಯ ಬಣ್ಣ ಕೊಡುವ ಸಂದರ್ಭಗಳು ಮತ್ತೆ ಮತ್ತೆ ಎದುರಾಗುತ್ತವೆ.

'ಅಬರಿಜಿನಲ್ ಆಸ್ಟ್ರೇಲಿಯಾ' ಪ್ರವಾಸ ಕಥನವನ್ನು ಬರೆಯುತ್ತಿರುವ ಈ ಹೊತ್ತು, ಆಕ್ರಮಿಸಿ ಹೋದ ಬಿಳಿಯರು ಆ ನೆಲದಲ್ಲಿ 50,000 ವರ್ಷಗಳಿಗೂ ಹಿಂದಿನಿಂದ ಬದುಕುತ್ತಿದ್ದ ಸ್ಥಳೀಯ ಕಪ್ಪುಜನರನ್ನು ನಿರ್ನಾಮ ಮಾಡುವಲ್ಲಿ ವೈಜ್ಞಾನಿಕವೆಂಬ ಸಮರ್ಥನೆಗಳನ್ನು ಬಳಸಿಕೊಂಡ ರೀತಿ ನನಗೆ ಆಘಾತ ತರಿಸಿದೆ. ವಿಷಾದವೆಂದರೆ, ಇದು ಎಂದೋ ಮುಗಿದುಹೋದ ಕತೆಯಲ್ಲ. ಮತ್ತೆ ಮತ್ತೆ ನಮ್ಮೆದುರು ಶೋಷಣೆಯ ಅಸ್ತ್ರವಾಗಿ ಎದುರಾಗುವ ಮಿಥ್ಯಾಕಥನ. ನೊಬೆಲ್ ಪ್ರಶಸ್ತಿ ಪಡೆದ ವಿಜ್ಞಾನಿಯೊಬ್ಬರು 21ನೇ ಶತಮಾನದಲ್ಲಿಯೂ, 'ಕಪ್ಪುಜನರಿಗೆ ಬುದ್ಧಿ ಕಡಿಮೆ' ಎಂದು ಸಾರಿದರೆ, 'ಬ್ಲಾಕ್ ಲೈಫ್ ಮ್ಯಾಟರ್ಸ್' ಎಂದು ಜಗತ್ತು ಈಗ ಕೂಗಿಡುತ್ತಿರುವುದು ಎಷ್ಟು ಅಗತ್ಯ, ಅನಿವಾರ್ಯ ಎಂದು ನಮಗೆ ಅರ್ಥವಾಗುತ್ತದೆ. (ಇದೇ ವಿಜ್ಞಾನಿ ಹಿಂದೆ ಹೆಂಗಸರ ಬುದ್ಧಿವಂತಿಕೆಯನ್ನೂ ಟೀಕಿಸಿದ್ದರು ಎಂಬುದನ್ನು ಮರೆಯುವಂತಿಲ್ಲ. ಓರ್ವ ಮಹಿಳೆಯ ಸಂಶೋಧನೆ, ದತ್ತಾಂಶದ ಆಧಾರದಿಂದಲೇ ಆತ ನೊಬೆಲ್ ಪ್ರಶಸ್ತಿಗೆ ಅರ್ಹವಾದ ತನ್ನ ಸಂಶೋಧನೆಯನ್ನು ಮಾಡಿದ್ದು ಎಂಬುದು ಮರೆತುಹೋದ ಕತೆಯಾಗಿದೆ.)

ವಿಜ್ಞಾನ ಮತ್ತು ಸಾಹಿತ್ಯ ಬದುಕನ್ನು, ಸಮಾಜವನ್ನು ಬದಲಿಸಬಲ್ಲ ಶಕ್ತ ರಂಗಗಳು. ಸಮಾನತೆಯ ಸಂಸ್ಕೃತಿಯ ಸಮಾಜವನ್ನು ಕಟ್ಟುವ ಹೊಣೆ ಸಾಹಿತಿ ಮತ್ತು ವಿಜ್ಞಾನಿ ಇಬ್ಬರ ಮೇಲೂ ಇದೆ. ■

